ಭೇಟಿ ಮಾಡುವುದಕ್ಕೆ ಎಲ್ಲರೂ ಹೋಗೋಣ ಎನ್ನುವ ಮಾತನ್ನು ಹೇಳಿದ್ದಾರೆ, ಇನ್ನು ಮುಂದಿನ ಐದಾರು ದಿವಸಗಳಲ್ಲೇ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಇವತ್ತು ತಮಿಳುನಾಡಿಗೆ ನೀರನ್ನು ಕೊಡ ತಕ್ಕ ಸಂದರ್ಭದಲ್ಲಿ ಕರ್ನಾಟಕ ರಾಜ್ಯವೂ ಆ ಸಂದರ್ಭದಲ್ಲೇನು ಕುಡಿಯುವ ನೀರಿಗೆ ತಮ್ಮ ಒಂದು ಪಾಲಿನ ನೀರನ್ನು ಕೊಡತಕ್ಕ ಔದಾರ್ಯವನ್ನೇನು ತೋರಿಸಿದ್ದೇವೆ, ಆ ಒಂದು ವಿಷಯವನ್ನು ಒಂದು ಕೇಂದ್ರ ಸರ್ಕಾರದ ಗಮನಕ್ಕೆ ಮತ್ತೊಮ್ಮೆ ತರುವುದರ ಮುಖಾಂತರ ಇವತ್ತು ಕುಡಿಯುವ ನೀರಿನ ಸಮಸ್ಯೆಗೆ ನಾವೇನು 7.56 ಟಿಎಂಸಿ ನೀರನ್ನು ಕೇಳುತ್ತಿದ್ದೇವೆ. ಇದಕ್ಕಾಗಿ ಆ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಎನ್ನುವುದಕ್ಕೆ ಎಲ್ಲ ಒಂದು ನಿಯೋಗವನ್ನು ತೆಗೆದುಕೊಂಡು ಹೋಗುವುದರ ಮುಖಾಂತರ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ತೀರ್ಮಾನವನ್ನು ಮಾಡೋಣವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ವಾಟಾಳ್ ನಾಗರಾಜ್‌ರವರು ಗೋವಾ ರಾಜ್ಯದವರು ತ್ಯಾಜ್ಯ ತಂದು ಹಾಕುತ್ತಿರುವ ಬಗ್ಗೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಗೋವಾ ಸರ್ಕಾರ ಮೊದಲಿನಿಂದಲೂ ಕನ್ನಡಿಗರ ಮೇಲೆ ದ್ವೇಷವನ್ನು ಕಾರುತ್ತಿದ್ದಾರೆ. ಕನ್ನಡಿಗರನ್ನು ಹೊರಗೆ ಹಾಕಿದ್ದಾರೆ. ಮತ್ತು ತ್ಯಾಜ್ಯ ವಸ್ತುಗಳನ್ನು ತಂದು ನಮ್ಮ ರಾಜ್ಯದಲ್ಲಿ ಹಾಕುತ್ತಿದ್ದಾರೆ. ಏಕೊ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನವನ್ನು ಕೊಡುತ್ತಿಲ್ಲ. ಸರ್ಕಾರದ ನಿಲುವೇನು? ಏನು ಮಾಡುತ್ತೀರಿ? ಆ ಗಡಿ ಭಾಗದಲ್ಲಿ ಏನಾಗಿದೆ? ಯಾರು ನೋಡಿಕೊಳ್ಳತಕ್ಕವರು? ಕಸವನ್ನು ತಂದು ಇಲ್ಲಿ ಹಾಕುತ್ತಿದ್ದರೆ ಕೇಳುವ ಪ್ರಶ್ನೆ ಇಲ್ಲ. ಇದರ ಬಗ್ಗೆ ದಯವಿಟ್ಟು ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

ಅಧ್ಯಕ್ಷರು : ಗೋವಾದ ಉತ್ತರವಾದ ಮೇಲೆ ಗೋಮಾಳದ ಬಗ್ಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಗೋವಾ ರಾಜ್ಯದಿಂದ ಕಸ ಇತ್ಯಾದಿಯನ್ನು ಕರ್ನಾಟಕ ರಾಜ್ಯ ಪ್ರದೇಶದಲ್ಲಿ ಎಸೆಯುತ್ತಿರುವ ಬಗ್ಗೆ ದಕ್ಷಿಣ ಗೋವಾದಲ್ಲಿರುವ ಮೆ: ಜೈನ್ ಉದ್ಯೋಗ ಲಿಮಿಟೆಡ್, ಉಕ್ಕಿನ ಕಾರ್ಖಾನೆಯವರು 50 ಸಿಮೆಂಟ್ ಚೀಲಗಳಲ್ಲಿ ಸಾಲಿಡ್ ಇಂಡಸ್ಟ್ರಿಯಲ್ ವೇಸ್ಟನ್ನು ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಹನುಮೋಡ, ರಾಮನಗರ ಗ್ರಾಮಗಳ ನಡುವೆ ಇರುವ ಎನ್‌ಹೆಚ್ 4ಎ ಎರಡೂ ಕಡೆ ಎಸೆದಿರುವುದು ನಿಜಸಂಗತಿಯಾಗಿರುತ್ತದೆ. ಕಾರವಾರದಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ದಿನಾಂಕ: 28-3-2006 ರಂದು ತನಿಖೆ ಮಾಡಿ ಗೋವಾ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಇದರ ನಂತರ ಸದರಿ

ಸಾಲಿಡ್ ವೇಸ್ಟನ್ನು ಗೋವಾದ ಮಂಡಳಿಯವರು ತೆಗೆಸಿರುತ್ತಾರೆ. ಇನ್ನು ಮುಂದೆ ಈ ತರಹದ ಘಟನೆಯಾದ ಸಂಬಂಧಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಸಲ್ಲಿಸಲಾಗುವುದೆಂದು ಗೋವಾ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಲಾಗಿದೆ. ಈಗಾಗಲೇ ಅದನ್ನು ವಾಪಸ್ ಅವರು ತೆಗೆಸಿದ್ದಾರೆ.

ಅಧ್ಯಕ್ಷರು : ಆಯಿತು. ಈಗ ಗೋಮಾಳದ ವಿಚಾರದಲ್ಲಿ ತೆಗೆದುಕೊಳ್ಳುತ್ತಿದ್ದೇನೆ ಬಹಳ ಮುಖ್ಯವಾದುದು. ರೈತರಿಗೆ ಎಲ್ಲಾ ಕಡೆ ಆ ಸಮಸ್ಯೆ ಕಾಡುತ್ತಿದೆ.

11. ಗಮನ ಸೆಳೆಯುವ ಸೂಚನೆ.

(ಅ) ಗೋಮಾಳ ಜಾಗವನ್ನು ಸರ್ಕಾರದ ವಿವಿಧ ಯೋಜನೆಗಳಿಗೆ ಮಂಜೂರು ಮಾಡುವ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಈ ಗೋಮಾಳವನ್ನು ಕೊಡಬಾರದೆಂದು ನಮ್ಮ ಹೈಕೋರ್ಟ್ ಒಂದು ಆದೇಶವನ್ನು ಹೊರಡಿಸಿದೆ. ಆದರೆ ಈ ಆದೇಶದಿಂದ ಅನೇಕ ಜನ ರೈತರು ಏನು ಗೋಮಾಳವನ್ನು ಉತ್ತು ಕೊಂಡಿದ್ದಾರೆ. ಅವರಿಗೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸರ್ಕಾರ ಸರಿಯಾದ ಸ್ಪಷ್ಟೀಕರಣವನ್ನು ಕೊಡಬೇಕು. ಅದಲ್ಲದೆ ಇನ್ನೊಂದು ಸಮಸ್ಯೆ ಆಗಿದೆ, ಈಗಾಗಲೇ ಮಂಜೂರಾಗಿರುವವರಿಗೂ ಕೂಡ ಹಕ್ಕುಪತ್ರಗಳನ್ನು ಕೊಡುತ್ತಿಲ್ಲ. ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಅವರಿಗೆ ಈಗಾಗಲೇ ಮಂಜೂರಾಗಿದೆ. ಹಿಂದೆ ಕಮಿಟಿಗಳಲ್ಲಿ ಮಂಜೂರಾಗಿದೆ. ಅದನ್ನು ಯಾವ ರೀತಿ ಮಾಡಬೇಕು? ಸರ್ಕಾರಕ್ಕೆ ಯಾವುದಾದರೂ ಕಾರಣಕ್ಕೆ ಜಾಗ ಬೇಕಾಗಿದ್ದರೆ ಅದನ್ನು ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಆ ದೃಷ್ಟಿಯಿಂದ ದಯಮಾಡಿ ಇದರ ಬಗ್ಗೆ ಸರಿಯಾದ ಸ್ಪಷ್ಟೀಕರಣವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಅಧ್ಯಕ್ಷರೇ, ಮಾನ್ಯ ಜೆ.ಹೆಚ್.ಪಟೇಲ್ ರವರ ಕಾಲದಲ್ಲಿ ರೈತರಿಗೆ ಅನುಕೂಲವಾಗುತ್ತೆ, ಅದನ್ನು ಕೊಡಬೇಕೆಂದು ಹೇಳಿ ಅವತ್ತು ಸರ್ಕಾರ ಒಂದು ಜಿ.ಓ.ವನ್ನು ಮಾಡಿ ಗೋಮಾಳ ಜಮೀನನ್ನು ಕೊಡುವುದಕ್ಕೆ ತೀರ್ಮಾನವನ್ನು ಮಾಡಿದರು. ಈಗ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದವರು ಇದನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ 224 ಕ್ಷೇತ್ರದಲ್ಲಿಯೂ ಬಹಳ ಜನರಿಗೆ ತೊಂದರೆಯಾಗುತ್ತದೆ. ಸುಮಾರು 10–15 ವರ್ಷಗಳಿಂದಲೂ ಈ ಜಮೀನನ್ನು ಮಾಡಿಕೊಂಡಿದ್ದಾರೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಈ ಬಗ್ಗೆ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) : ಮಾನ್ಯ ಅಧ್ಯಕ್ಷರೇ, ಗೋಮಾಳ ಜಮೀನನ್ನು ಹಂಚಬಾರದೆಂದು ಹೇಳಿ ನ್ಯಾಯಾಲಯವೇನು ತೀರ್ಪನ್ನು ಕೊಟ್ಟಿದ್ದಾರೆ, ಅದು ಸ್ವಾಗತಾರ್ಹವಾದಂಥ ಕ್ರಮ. ನಾವು ಹೇಳುವುದಿಷ್ಟೆ, ಎಲ್ಲಿ ಗೋಮಾಳ ಖಾಲಿ